ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಡಾ|| ಡಿ. ತಿಮ್ಮಯ್ಯ ಇವರು ನಿಯಮ 330 ರಡಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.

ಸೂಚನೆ:	**ಮೈಸೂರು ನಗರದ ಕೆಂಚಲಗೂಡು ಬಡಾವಣೆಯಲ್ಲಿ ವಿವೇಚನಾ ಕೋಟಾದಲ್ಲಿ ಲಭ್ಯವಿರುವ ನಿವೇಶನಗಳನ್ನು ಸರ್ಕಾರದ ಆದೇಶ ಸಂಖ್ಯೆ: DOH/276/KHB/2016 BANGALORE DATED 21.12.2017ರ ತಿದ್ದುಪಡಿ ಆದೇಶದಂತೆ ವಿವಿಧ ವರ್ಗಗಳಲ್ಲಿ ಶೇಕಡವಾರು ಕಾಯ್ದಿರಿಸಿ, ಹಂಚಿಕೆ ಮಾಡಲು ಅರ್ಹ ಅರ್ಜಿದಾರರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿರುತ್ತದೆ. ಈ ಕೋಡಾದಡಿಯಲ್ಲಿ ಎಷ್ಟು ಮಂದಿ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿ ಸಲ್ಲಿಸಿರುವವರಿಗೆ ಇದುವರೆಗೂ ನಿವೇಶನ ಹಂಚಿಕೆ ಮಾಡದಿರಲು ಕಾರಣಗಳೇನು; ಯಾವಾಗ ನಿವೇಶನಗಳನ್ನು ಹಂಚಿಕೆ ಮಾಡಲಾಗುವುದು ಎಂಬುದರ ಮಾಹಿತಿ ಒದಗಿಸುವ ಕುರಿತು.**

ಉತ್ತರ:

ಸರ್ಕಾರದ ಆದೇಶ ಸಂಖ್ಯೆ: DOH/276/KHB/2016 BANGALORE DATED 21.12.2017ರ ತಿದ್ದುಪಡಿ ಆದೇಶದಂತೆ ಕರ್ನಾಟಕ ಗೃಹ ಮಂಡಳಿ ಹಂಚಿಕೆ (ತಿದ್ದುಪಡಿ) ನಿಯಮಗಳು, 2017ರ ನಿಯಮ 4 ರನ್ವಯ ವಿವೇಚನಾ ಕೋಟಾದಡಿ ಮೈಸೂರು ನಗರದ ಕೆಂಚಲಗೂಡು ಬಡಾವಣೆಯಲ್ಲಿ ಕಾಯ್ದಿರಿಸಲಾದ ಸ್ವತ್ತುಗಳ ಹಂಚಿಕೆಗಾಗಿ ದಿನಾಂಕ: 31.12.2017 ರಂದು ಪತ್ರಿಕಾ ಪ್ರಕಟಣೆ ಹೊರಡಿಸಿ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು.

ಅದರಂತೆ ಕಾಯ್ದಿರಿಸಿದ ನಿವೇಶನಗಳು ಹಾಗೂ ಸ್ವೀಕರಿಸಿರುವ ಅರ್ಜಿಗಳ ವಿವರ ಈ ಕೆಳಕಂಡಂತಿರುತ್ತದೆ.

<u>ಲಭ್ಯವಿರುವ ನಿವೇಶನಗಳು: 186, ಸ್ವೀಕರಿಸಿರುವ ಅರ್ಜಿಗಳು: 334</u>

ವರ್ಗ	ಎ (ಶೇ.25)		ಬಿ(I) (ಶೇ.20)		ಬಿ(II) (ಶೇ.20)		ಬಿ (III) (ಎ)(ಬಿ)(ಸಿ) (ಶೇ.10)		ಸಿ (ಶೇ.25)	
	ನಿವೇಶನ	ಅರ್ಜಿಗಳು	ನಿವೇಶನ	ಅರ್ಜಿಗಳು	ನಿವೇಶನ	ಅರ್ಜಿಗಳು	ನಿವೇಶನ	ಅರ್ಜಿಗಳು	ನಿವೇಶನ	ಅರ್ಜಿಗಳು
EWS	09	50	07	04	07	08	02	04	09	23
LIG	15	36	11	08	12	06	07	23	15	35
MIG	16	28	12	06	13	04	06	12	16	17
HIG	07	21	06	04	06	13	03	12	07	20
Total	**47**	**135**	**36**	**22**	**38**	**31**	**18**	**51**	**47**	**95**

ಈ ಮೇಲಿನಂತೆ ಸ್ವೀಕೃತಗೊಂಡಿರುವ ಅರ್ಜಿಗಳಿಗೆ ಹಂಚಿಕೆ ಪ್ರಕ್ರಿಯೆ ಕೈಗೊಳ್ಳುವ ಹಂತದಲ್ಲಿ ಕರ್ನಾಟಕ ಗೃಹ ಮಂಡಳಿ ಹಂಚಿಕೆ ರೆಗ್ಯುಲೇಶನ್ 1983ರ ವಿವೇಚನಾ ಕೋಟಾದ ನಿಯಮ 4ರ ಎ & ಸಿ ಹಾಗೂ ನಿಯಮ 9ಎ(ಸಿ) ಸಿಂಧುತ್ವವನ್ನು ಪ್ರಶ್ನಿಸಿ ಶ್ರೀ ಭೋಜಪ್ಪ ಕೆ. ಅವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ನಂ.8340/2018 ರೆಲ್ಲಿ ದಾವೆ ಹೂಡಿದ್ದು, ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ: 18.10.2019 ರಂದು "The petition is allowed, The Categories "A" and "C" in the table in Regulation 4 and Category "C" in the table in Regulation 9A as well as explanation (a) to both regulation are hereby struck down being unconstitutional" ಎಂದು ಆದೇಶ ನೀಡಿರುತ್ತದೆ.

ತದನಂತರ ಕರ್ನಾಟಕ ಗೃಹ ಮಂಡಳಿ ಹಂಚಿಕೆ ನಿಯಮಾವಳಿ 2017ಕ್ಕೆ ತಿದ್ದುಪಡಿ ತರಲಾಗಿದ್ದು, ಸರ್ಕಾರದ ಆದೇಶ ಸಂಖ್ಯೆ: DOH 75 KHB 2020, DATED 24.08.2022 ತಿದ್ದುಪಡಿ ನಿಯಮಾವಳಿಯಂತೆ ದಿನಾಂಕ: 31.12.2017ರ ಪ್ರಕಟಣೆಗೆ ಅನುಗುಣವಾಗಿ ಸ್ವೀಕೃತಗೊಂಡಿರುವ ಅರ್ಜಿಗಳ ಪರಿಶೀಲನಾ ಕಾರ್ಯ ಪ್ರಗತಿಯಲ್ಲಿದ್ದು, ಶೀಘ್ರದಲ್ಲಿಯೇ ಹಂಚಿಕೆಗೆ ಕ್ರಮ ವಹಿಸಲಾಗುವುದು.

ಕಡತ ಸಂಖ್ಯೆ: ವಇ 99 ಕಗೃಮಂ 2023

(ಬಿ. ಜೆಡ್. ಜಮೀರ್ ಅಹ್ಮದ್ ಖಾನ್)
ವಸತಿ, ವಕ್ಫ್ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ
ಸಚಿವರು.